೧೭) ಕಬಿನಿ ಜಲಾಶಯದಿಂದ ಮುಳುಗಡೆಯಾದ ಹೆಚ್. ಡಿ. ಕೋಟೆ ತಾಲ್ಲೂಕಿನ ೩೦ ಹಳ್ಳಿಗಳ ನಿರಾಶ್ರಿತರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದು.

ಶ್ರೀ ಎಂ. ಶಿವಣ್ಣ.—ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಕಬಿನಿ ಜಲಾಶಯದಿಂದ ಸುಮಾರು ೩೩ ಹಳ್ಳಿಗಳು ಮುಳುಗಡೆಯಾದ ನಂತರ ಆ ಹಳ್ಳಿಗಳ ಜನರನ್ನು ಸ್ಥಳಾಂತರಗೊಳಿಸಿ ಹೊಸ ಕಾಲೋನಿಗಳನ್ನು ನಿರ್ಮಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳಾಂತರಗೊಂಡ ಹಳ್ಳಿಗಳಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಭರವಸೆಯನ್ನೂ ಸಹ ನೀಡಲಾಯಿತು. ಮುಳುಗಡೆಯಾಗಿ ಸ್ಥಳಾಂತರಗೊಂಡು ಸುಮಾರು ೧೫-೨೦ ವರ್ಷಗಳಾಗುತ್ತಾ ಬಂದಿದ್ದರೂ ಸಹ ಸರಿಯಾದ ಯಾವ ನಾಗರೀಕ ಸೌಲಭ್ಯವನ್ನು ಒದಗಿಸದಿರುವುದು ವಿಷಾದನೀಯ. ಮುಳುಗಡೆಯಾದ ನಂತರ ಕಬಿನಿ ಪುನರ್ವಸತಿ ಸಮಿತಿ ಸಭೆಯನ್ನು ಸಹ ರಚಿಸಿದ್ದು ಈ ಸಮಿತಿಯಲ್ಲಿ ಅನೇಕ ನಿರ್ಣಯಗಳನ್ನು ಮಾಡಲಾಗಿದೆ. ಆದರೇ ಈ ನಿರ್ಣಯಗಳಿಗೆ ಮಾನ್ಯತೆ ಬಂದಂತಿಲ್ಲ.

ಪುನರ್ವಸತಿಗೊಂಡ ಪ್ರದೇಶದಲ್ಲಿ ಎರಡು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ೧೯೭೩ ರಿಂದಲೂ ನಿರ್ಣಯಗಳನ್ನು ಮಾಡುತ್ತಾ ಬರಲಾಗಿದೆ. ತಾರೀಖು ೩೦-೧೧-೭೪ರಲ್ಲಿ ಕೆಂಚನಹಳ್ಳಿ ಮತ್ತು ಮಂಗ್ಲಿ ಗ್ರಾಮಗಳನ್ನು ಆಯ್ಕೆ ಮಾಡಲಾಯಿತು. ನಂತರ ೧೦-೧೧-೧೯೭೬ರಲ್ಲಿ ಕೆಂಚನಹಳ್ಳಿ ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಕೋರಲಾಗಿತು. ಇದರ ನಂತರ ೧೯೭೮ರಲ್ಲಿ ಕೆಂಚಹಳ್ಳಿಯಲ್ಲಿ ಪ್ರೌಢಶಾಲೆಯನ್ನು ಬಾಡಿಗೆ ಕಟ್ಟಡದಲ್ಲಿ ಪ್ರಾರಂಭ ಮಾಡಲಾಯಿತು. ಶಾಲೆ ಪ್ರಾರಂಭವಾಗಿ ೧೧ ವರ್ಷಗಳಾದವು. ಈಗ ಈ ಶಾಲೆಯಲ್ಲಿ ಸುಮಾರು ೧೨೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ವ್ಯಾಸಾಂಗ ಮಾಡುತ್ತಿದ್ದಾರೆ. ಕಟ್ಟಡವಿಲ್ಲದೆ ಶೋಚನೀಯ ಸ್ಥಿತಿಯಲ್ಲಿದೆ. ಕಟ್ಟಡ ಕಟ್ಟುವ ವಿಚಾರದಲ್ಲಿ ಕಬಿನಿ ಪುನರ್ವಸತಿ ಸಮಿತಿ ಹಿಂದೆ ಅನೇಕ ಬಾರಿ ಕೇರ್ಮಾನ ತೆಗೆದುಕೊಂಡಿರುವ ಬಗ್ಗೆ ಮಾನ್ಯ ನೀರಾವರಿ ಹಾಗೂ ಪುನರ್ವಸತಿ ಸಚಿವರ ಗಮನ ಸೆಳೆಯಬಯಸುತ್ತೇನೆ,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

೧೮) ದೊಡ್ಡ ಬಳ್ಳಾಪುರ ತಾಲ್ಲೂಕಿನ ರೆಪ್ಪಾಪುರ ಗ್ರಾಮದ ಶೆಟ್ಟಿಲಪ್ಪನ ವಂಗ ನಾಗರಾಜು ಎನ್ನುವ ಕಾರ್ಮಿಕನನ್ನು ನಿಗೂಢ ರೀತಿಯಲ್ಲಿ ಕೊಲೆ ಮಾಡಿರುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಿಲ್ಲೆ ದೊಡ್ಡ ಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ರೆಪ್ಪಾಪುರ ಗ್ರಾಮದ ಶೆಟ್ಟಿಲಪ್ಪನ ವಂಗ ನಾಗರಾಜು ಎಂಬ ಪವರ್ ಲೂಂನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಕೆಲಸದಿಂದ ತೆಗೆಯಲ್ಪಟ್ಟನು. ನಾಗರಾಜ ಈ ಅನ್ಯಾಯದ ವಿರುದ್ಧ ಪ್ರತಿಭಟಿಸಿ ಲೇಬರ್ ಕೋರ್ಟಿನಲ್ಲಿ ಕೇಸು ಹಾಕಿರುತ್ತಾನೆ ನಿಗೂಢ ರೀತಿಯಲ್ಲಿ ೩೦-೫-೮೮ರಂದು ಕೊಲೆಯಾಗಿದ್ದಾನೆ. ಮಂಖಿ ಕೈಕಾಲು ಜಜ್ಜಲ್ಪಟ್ಟಿವೆ.

ಮಾಲೀಕ ಪೋಲೀಸ್ ವೈದ್ಯರು ಒಂದುಗೂಡಿ ಮರದ ಮೇಲಿಂದ ಬಿದಿದ್ದಾನೆಂದು ಕಥೆ ಜೋಡಿಸಲು ಅಪರಾಧವನ್ನು ಹತ್ತಿಕ್ಕಲು ಹೊರಟ್ಟಿದ್ದಾರೆಂಬ ಶಂಕೆಯಿದೆ. ಈ ವೈದ್ಯಾಧಿಕಾರಿಯ ಭ್ರಷ್ಟತೆಯ ಬಗ್ಗೆ ಈಗಾಗಲೇ ಚಳುವಳಿಗಳಾಗಿದ್ದು ಇಂತಹ ಘೋರ ಅಪರಾಧಗಳನ್ನು ಕೈಬಿಡುವುದಂ ತಂಬಾ ಅಪರಾಧ ಕೃತ್ಯ ಇದರ ಬಗ್ಗೆ ಸಮಗ್ರ ನ್ಯಾಯವಾದ ತನಿಖೆ ಆಗಬೇಕು ಎಂತಹ ದೊಡ್ಡವರಾಗಿರಲಿ ಅಪರಾಧಿತರಿಗೆ ತಕ್ಕ ಶಿಕ್ಷೆಯಾಗಬೇಕು. ಜನತೆಗೆ ತಕ್ಕ ವಿಚಾರಣೆ ನಡೆದಿದೆ, ಭೀತಿ ಪಡಬೇಕಾಗಿಲ್ಲ ಎಂದೆನಿಸಬೇಕು. ಇದರ ಬಗ್ಗೆ ಸಿ. ಓ. ಡಿ. ಯವರಿಗೆ ವಿಚಾರಣೆ ಮಾಡಲು ಅನುಮತಿ ನೀಡಬೇಕು. ಜನರಲ್ಲಿ ಈಗ ಬಂದಿರುವ ಅನುಮಾನಗಳನ್ನು ಹೆತ್ತಿಕ್ಕುವಂತಾಗಬೇಕೆಂದು ಮಾನ್ಯ ಗೃಹ ಮಂತ್ರಿಗಳ ಹೇಳಿಕೆಯನ್ನು ಕೇಳುತ್ತೇನೆ.

ಶ್ರೀ ವೀರಣ್ಣ.—ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಗ್ರಾಮದ ಹೆಸರು ರೆಪ್ಪಾಪುರ ಮತ್ತು ವ್ಯಕ್ತಿಯ ಹೆಸರು ನಾಗರಾಜು ಅಲ್ಲವೆಂದು ವಿಚಾರಣೆಯಿಂದ ತಿಳಿದು ಬಂದಿದೆ. ದೊಡ್ಡ ಬಳ್ಳಾಪುರ